**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,</u>**

**<u>ಮೂಡಿಗೆರೆ</u>**

**<u>ಸಿ.ಸಿ. ಸಂಖ್ಯೆ: 1647/2023</u>**

**<u>ಪಿರ್ಯಾದಿ</u>** : ಶ್ರೀ ಜಿ.ಜಿ.ರತನ್
ಬಿನ್ ಹೆಚ್.ಡಿ. ಗೋಪಾಲ,
ವಯಸ್ಸುಃ 36 ವರ್ಷ,
ವಾಸಃ ಜಿ. ಹೊಸಹಳ್ಳಿ ಗ್ರಾಮ
ಮತ್ತು ಅಂಚೆ, ಗೋಣಿಬೀಡು
ಹೋಬಳಿ, ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**<u>ಆರೋಪಿ</u>** : ಶ್ರೀಮತಿ ಎಂ.ಜಿ.ಭಾನುಮತಿ
ಕೋಂ ಕಿರಣ್ ಕೆ.ಎಂ.
ವಯಸ್ಸುಃ 38 ವರ್ಷ,
ವಾಸಃ ದಾರದಹಳ್ಳಿ ಗ್ರಾಮ ಮತ್ತು
ಅಂಚೆ, ಕಡಿದಾಳು, ಕಸಬಾ ಹೋಬಳಿ,
ಮೂಡಿಗೆರೆ ತಾಲ್ಲೂಕು.

**<u>ಆಪಾದನೆಯ ಸಾರಾಂಶ</u>**

ಶ್ರೀ. ವಿಶ್ವನಾಥ್ ಎ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಮನೆ ಕಟ್ಟುವ ಸಲುವಾಗಿ ಪಿರ್ಯಾದಿಯಿಂದ 7,50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡ, ಮೂಡಿಗೆರೆ

ಶಾಖೆಯ ಚೆಕ್ ಸಂಖ್ಯೆ: 000003, ದಿನಾಂಕ 22.08.2023, ರೂ.7,50,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಗೋಣಿಬೀಡು ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, "ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ (Funds insufficient) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 02.09.2023 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು **ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರ: 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ: 2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

*(ಆರೋಪಿಗೆ ದಿನಾಂಕ 08.02.2024 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

ಮೂಡಿಗೆರೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ದಿನಾಂಕ: 08.02.2024 ಜೆ.ಎಂ.ಎಫ್.ಸಿ, ಮೂಡಿಗೆರೆ.